www.varthabharati.in
ಜನದನಿಯ ಸಾರಥಿ
epaper.varthabharati.in
ವಾರ್ತಾ ಭಾರತಿ
ಸತ್ಯ ಎಲ್ಲರಿಗೆ
◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
1 ಜುಲೈ 2018
ರವಿವಾರ
VARTHABHARATHI KANNADA DAILY
/ Varthabharati
REGD.NO: MNG/958/2016-18 RNI N0. KAR KAN/2003/11378
ಸಂಪುಟ 15 ● ಸಂಚಿಕೆ 297 ● ಮಂಗಳೂರು

Best Price Guarantee
FURNITURE MALL
UDUPI : Kadiya...
MANGALORE : Kottara...
SHIMOGA : BH Ro...

## ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಶುಲ್ಕ ನಿಗದಿ

# ಸರಕಾರಿ ಸೀಟಿಗೆ 19,090 ರೂ., ಖಾಸಗಿ ಸೀಟಿಗೆ 50 ಸಾವಿರ ರೂ.

ಬೆಂಗಳೂರು, ಜೂ.30: ಸರಕಾರಿ ಅನುದಾನಿತ ಹಾಗೂ ಅನುದಾನರಹಿತ ವೃತ್ತಿಪರ ಕಾಲೇಜುಗಳ ಇಂಜಿನಿಯರಿಂಗ್ ಹಾಗೂ ವಾಸ್ತುಶಿಲ್ಪ ಕೋರ್ಸ್‌ಗಳಿಗೆ ಸರಕಾರ ಶುಲ್ಕವನ್ನು ನಿಗದಿ ಪಡಿಸಿದೆ.

ಸರಕಾರಿ ಕಾಲೇಜು ಮತ್ತು ವಿಶ್ವವಿದ್ಯಾನಿಲಯ ಘಟಕ ಕಾಲೇಜಿನಲ್ಲಿರುವ ಶೇ.100ರಷ್ಟು ಸರಕಾರಿ ಕೋಟಾದ ಸೀಟುಗಳಿಗೆ 19,090ರೂ., ಖಾಸಗಿ ಅನುದಾನಿತ ಕಾಲೇಜಿನಲ್ಲಿರುವ ಶೇ.95 ಸರಕಾರಿ ಕೋಟಾದ ಸೀಟುಗಳಿಗೆ 19,090ರೂ. ಹಾಗೂ ಶೇ.5ರಷ್ಟು ಆಡಳಿತ ಮಂಡಳಿ ಸೀಟುಗಳಿಗೆ 1.21ಲಕ್ಷ ರೂ. ಅಥವಾ 1.70ಲಕ್ಷ ರೂ.ಶುಲ್ಕ ನಿಗದಿಗೊಳಿಸಿದೆ.




ಖಾಸಗಿ ವಿ.ವಿ.ಗಳು ಮತ್ತು ಎಐಸಿಟಿಇ ಅನುಮತಿ ಪಡೆದಿರುವ ಡೀಮ್ಡ್ ವಿ.ವಿ.ಗಳು ವಿಶ್ವವಿದ್ಯಾನಿಲಯದ ಅಧಿನಿಯಮದಲ್ಲಿ ಉಲ್ಲೇಖಿಸಿರುವ ಸರಕಾರ ಕೋಟಾದ ಸೀಟುಗಳಿಗೆ ಖಾಸಗಿ ವಿ.ವಿ. ಕಾಯ್ದೆ ಅನ್ವಯ ಶುಲ್ಕ ನಿಗದಿ ಸಮಿತಿ ರಚಿಸಿಕೊಂಡು, 50 ಸಾವಿರ ರೂ. ಮಿತಿಗಿಂತ ಹೆಚ್ಚು ಶುಲ್ಕ ನಿಗದಿಗೊಳಿಸಿದ್ದರೆ ಅದನ್ನು 50 ಸಾವಿರ ರೂ. ಸೀಮಿತಗೊಳಿಸಬೇಕು. 50 ಸಾವಿರ ರೂ.ಕ್ಕಿಂತ ಕಡಿಮೆ ಶುಲ್ಕ ನಿಗದಿ ಮಾಡಿದರೆ ಅದನ್ನು 45 ಸಾವಿರ ರೂ. ಸೀಮಿತಗೊಳಿಸುವಂತೆ ಸರಕಾರ ಸೂಚಿಸಿದೆ.

2018-19ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರಕಾರಿ ಇಂಜಿನಿಯರಿಂಗ್, ವಿವಿಗಳು, ಖಾಸಗಿ, ಸರಕಾರಿ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ವಾಸ್ತುಶಿಲ್ಪ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಪಾವತಿಸಬೇಕಾದ ಬೋಧನಾ ಶುಲ್ಕ, ವಿವಿಯ ಶುಲ್ಕ ಮತ್ತು ಸೀಟು ಹಂಚಿಕೆ ಪ್ರಮಾಣಕ್ಕೆ ಕೆಲವೊಂದು ಷರತ್ತು ವಿಧಿಸಲಾಗಿದೆ.

ಷರತ್ತುಗಳು: ಎಲ್ಲ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(ಎಐಸಿಟಿಇ) ನಿಗದಿ ಪಡಿಸಿರುವ ಕೋರ್ಸ್‌ಗಳ ಒಟ್ಟು ಪ್ರವೇಶ ಮಿತಿಯ ಮೇಲೆ ಶೇ.5ರಷ್ಟು ಸೂಪರ್ ನ್ಯೂಮರರಿ ಕೋಟಾದ ಸೀಟುಗಳನ್ನು ಯಾವುದೇ ಬೋಧನಾ ಶುಲ್ಕವಿಲ್ಲದೆ ಮೆರಿಟ್ ಆಧಾರದಲ್ಲಿ ಹಂಚಬೇಕು. ವಿವಿ ನಿಗದಿಪಡಿಸುವ ಶುಲ್ಕವನ್ನು ಮಾತ್ರ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪಾವತಿಸಬೇಕು.

ಸರಕಾರಿ ಇಂಜಿನಿಯರಿಂಗ್ ಕಾಲೇಜು, ಖಾಸಗಿ ಅನುದಾನಿತ ಮತ್ತು ವಿವಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ವಾರ್ಷಿಕ 15 ಸಾವಿರ ರೂ.ಶುಲ್ಕವನ್ನು ವಿವಿ ಶುಲ್ಕವಾಗಿ ಪಾವತಿಸಬೇಕು. ಅಲ್ಪಸಂಖ್ಯಾತವಲ್ಲದ ಶಿಕ್ಷಣ ಸಂಸ್ಥೆಗಳಲ್ಲಿ ಎನ್ ಆರ್ಐ ಮತ್ತು ಇತರ ಕೋಟಾ ಶೇ.25ರಷ್ಟು ಮೀರಬಾರದು. ಅಲ್ಪಸಂಖ್ಯಾತ ಕಾಲೇಜುಗಳಿಗೆ ಎನ್ ಆರ್ಐ ಮತ್ತು ಇತರ ಕೋಟಾದ ಮಿತಿ ಶೇ.30ರಷ್ಟು ಮೀರುವಂತಿಲ್ಲವೆಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ.



SUNDAY TIMES OF INDIA
Bennett, Coleman & Co. Ltd
JULY 1, 2018 | PAGES 28 | INCLUDING TIMESLIFE! | TIMESOFINDIA.COM | EPAPER.TIMESOFINDIA.COM
MANGALURU

birac

**Biotechnology Industry Research Assistance Council**
**(A Govt. of India Enterprise)**

BIG
Kick Starting Entrepreneurship

# BIG

13th Call

## BIOTECHNOLOGY IGNITION GRANT

For Igniting New Ideas

**UP TO INR 50 LAKHS AS GRANT-IN-AID**

## INNOVATIVE IDEA WITH POTENTIAL FOR COMMERCIALIZATION

*More than 300 ideas supported so far*

**Eligible Innovators:**

- Startup having a registered company/ LLP incorporated on/after 1st July, 2015.
- Individual Entrepreneur including Scientist, Faculty, Research Scholar, Graduate in any discipline.

**—Seek Mentoring from BIRAC's BIG Partners—**

| IKP | KIIT-TBI | VENTURE CENTER | C-CAMP | FITT | SIIC |
|---|---|---|---|---|---|
| www.ikpknowledgepark.com | www.kiitincubator.in | www.venturecenter.co.in | www.ccamp.res.in | www.fitt-iitd.in | www.iitk.ac.in/siic/d/ |

**APPLY BY 16th AUGUST 2018 (5:30 pm)**

**Apply online:**
**http://www.birac.nic.in**

**For queries, please contact: Ms Taranjeet Kaur**
**email: biracbig.dbt@nic.in; sped.birac@gov.in**

REDUCTION SALE
02-07-2018 ONWARDS
CHUDIDAAR, KURTHIS, KIDS WEAR
JEANS PANTS, TOPS & LEGGINGS,
SAREE & DRESS MATERIALS
JAYALAXMI SILKS
ಜಯಲಕ್ಷ್ಮೀ ಸಿಲ್ಕ್
UDYAVARA, Udupi, Phone: 0820-2520758, 2528724

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಸೋಮವಾರ, ಜುಲೈ 2, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00

### ವೃತ್ತಿಪರ ಕೋರ್ಸ್: ಜುಲೈ ಅಂತ್ಯದೊಳಗೆ ಮುಗಿಯಬೇಕು ಪ್ರಕ್ರಿಯೆ

# ಸೀಟ್ ಮ್ಯಾಟ್ರಿಕ್ಸ್ ವಿಳಂಬ: ವಿದ್ಯಾರ್ಥಿಗಳಲ್ಲಿ ಆತಂಕ

ರಾಜು ಖಾರ್ವಿ ಕೊಡೇರಿ

ಬೆಂಗಳೂರು, ಜು. 1: ಜುಲೈ ಆರಂಭವಾದರೂ ಪ್ರಸಕ್ತ ಸಾಲಿನ ವೃತ್ತಿಪರ ಕೋರ್ಸ್‌ಗಳ ಸಂಪೂರ್ಣ ಸೀಟ್ ಮ್ಯಾಟ್ರಿಕ್ಸ್ ಅನ್ನು ರಾಜ್ಯ ಸರಕಾರ ಇನ್ನೂ ಪ್ರಕಟಿಸಿಲ್ಲ.

ಶಿಕ್ಷಣ

ಸದ್ಯಕ್ಕೆ ಬರೇ ಸರಕಾರಿ ಹಾಗೂ ಅನುದಾನಿತ ಕಾಲೇಜುಗಳ ಸೀಟ್ ಮ್ಯಾಟ್ರಿಕ್ಸ್ ಮಾತ್ರ ಪ್ರಕಟವಾಗಿದೆ. ಖಾಸಗಿ ಕಾಲೇಜುಗಳ ಸೀಟು ವಿವರ ಬಂದಿಲ್ಲ.

ಜು. 31ರೊಳಗೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆ ಮುಗಿಸಬೇಕಾಗಿದ್ದು ಇನ್ನೂ ಅಭ್ಯರ್ಥಿಗಳಿಗೆ ಆಪ್ಶನ್ ಎಂಟ್ರಿ ನೀಡಲಾಗದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು ಇಕ್ಕಟ್ಟಿಗೆ ಸಿಲುಕಿದ್ದಾರೆ. ಒಂದು ವೇಳೆ ಖಾಸಗಿ ಕಾಲೇಜುಗಳ ಸೀಟು ಮ್ಯಾಟ್ರಿಕ್ಸ್ ಬರುವ ಮುನ್ನ ಆಪ್ಶನ್ ಎಂಟ್ರಿಗೆ ಅವಕಾಶ ಕಲ್ಪಿಸಿದರೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆಯ್ಕೆಗೆ ಅವಕಾಶ ಇಲ್ಲದೆ ಅನ್ಯಾಯವಾಗಲಿದೆ. ▸ ಪುಟ -4

## ಇನ್ನೂ ಆಪ್ಶನ್ ಎಂಟ್ರಿ ಅವಕಾಶ ನೀಡಿಲ್ಲ

"ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಜು. 31ರೊಳಗೆ ಪೂರ್ಣಗೊಳಿಸಬೇಕು. ಸರಕಾರ ಖಾಸಗಿ ಕಾಲೇಜುಗಳ ಸೀಟ್ ಮ್ಯಾಟ್ರಿಕ್ಸ್ ನೀಡದೆ ಆಪ್ಶನ್ ಎಂಟ್ರಿ ಲಿಂಕ್ ಓಪನ್ ಮಾಡಲು ಸಾಧ್ಯವಿಲ್ಲ. ಸೀಟು ಹಂಚಿಕೆ ಕುರಿತು ಸರಕಾರ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವಿನ ಒಪ್ಪಂದದ ಬಗ್ಗೆಯೂ ಮಾಹಿತಿ ಬಂದಿಲ್ಲ.

-ಗಂಗಾಧರಯ್ಯ,
ಆಡಳಿತಾಧಿಕಾರಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

## ಎಲ್ಲ ಕೋರ್ಸ್‌ಗೂ ಒಂದೇ ಲಿಂಕ್

ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಹೊರತುಪಡಿಸಿ ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ಪಶುಸಂಗೋಪನೆ ಮೊದಲಾದ ಕೋರ್ಸ್‌ಗಳಿಗೆ ಒಂದೇ ಲಿಂಕ್ ಮೂಲಕ ಆಪ್ಶನ್ ಎಂಟ್ರಿ ಮಾಡಬಹುದು. ಖಾಸಗಿ ಸೀಟ್ ಮ್ಯಾಟ್ರಿಕ್ ಪ್ರಕಟವಾದ ಬಳಿಕ ಪ್ರಾಧಿಕಾರದಿಂದ ಆಪ್ಶನ್ ಎಂಟ್ರಿಗೆ ಅವಕಾಶ ನೀಡಲಾಗುತ್ತದೆ. ಎಲ್ಲ ಕಾಲೇಜುಗಳ ಸೀಟು ವಿವರವೂ ಅಲ್ಲಿ ಇರಲಿದೆ. ವಿದ್ಯಾರ್ಥಿಗಳು ರ್‍ಯಾಂಕ್ ಅನುಗುಣವಾಗಿ ಕಾಲೇಜು ಆಯ್ದುಕೊಳ್ಳಲು ಅವಕಾಶ ಇರುತ್ತದೆ ಎಂದು ಪ್ರಾಧಿಕಾರದ ಹಿರಿಯ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಪದೇ ಪದೆ ಸೀಟು ಬದಲಾವಣೆಗೆ ವೆಬ್‌ಸೈಟ್‌ನಲ್ಲಿ ಅವಕಾಶವಿಲ್ಲ. ಪಡೆದ ಸೀಟು ಅಂತಿಮಗೊಳಿಸಿ, ಶುಲ್ಕ ಪಾವತಿಸಿ ಪ್ರವೇಶ ಪತ್ರ ವೆಬ್‌ಸೈಟ್ ಮೂಲಕವೇ ನೀಡಲಾಗುತ್ತದೆ. ಎಲ್ಲ ಸೀಟ್ ಮ್ಯಾಟ್ರಿಕ್ಸ್ ಬಂದ ಬಳಿಕ ಆಪ್ಶನ್ ಎಂಟ್ರಿಗೆ ಅವಕಾಶ ನೀಡುತ್ತೇವೆ ಎಂದು ವಿವರಿಸಿದ್ದಾರೆ.

# ವಿದ್ಯಾರ್ಥಿಗಳಲ್ಲಿ ಆತಂಕ

(ಒಂದನೇ ಪುಟದಿಂದ)

38 ಸರಕಾರಿ, ಅನುದಾನಿತ ಎಂಜಿನಿಯರಿಂಗ್ ಕಾಲೇಜುಗಳ 12,700 ಸೀಟುಗಳು ಮತ್ತು ಕೃಷಿ ವಿಜ್ಞಾನ ಮತ್ತು ಪಶು ವೈದ್ಯಕೀಯ ಕೋರ್ಸ್‌ಗಳ ಸುಮಾರು 2,200 ಸೀಟುಗಳನ್ನು ಈಗಾಗಲೇ ಪ್ರಾಧಿಕಾರ ಪ್ರಕಟಿಸಿದೆ. ಸುಪ್ರೀಂಕೋರ್ಟ್ ಆದೇಶದನ್ವಯ ಜು. 31ರೊಳಗೆ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಆದರೆ ಇದುವರೆಗೆ ವಿದ್ಯಾರ್ಥಿಗಳ ದಾಖಲೆ ಪರಿಶೀಲನೆ ವಿನಾ ಬೇರ್‍ಯಾವುದೇ ಪ್ರಕ್ರಿಯೆ ನಡೆದಿಲ್ಲ. ಪೂರ್ಣ ಪ್ರವೇಶಾತಿ ಪ್ರಕ್ರಿಯೆ ಮುಗಿಸಲು ಕನಿಷ್ಠ ಒಂದೂವರೆ ತಿಂಗಳು ಬೇಕು. ನಿಗದಿತ ಕಾಲಮಿತಿಯೊಳಗೆ ಪ್ರಕ್ರಿಯೆ ಮುಗಿಯದೆ ಇದ್ದರೆ ಕಾಲಾವಕಾಶ ವಿಸ್ತರಿಸುವಂತೆ ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

ಖಾಸಗಿ ಕಾಲೇಜುಗಳಲ್ಲಿ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಸರಕಾರ ಮತ್ತು ಕಾಲೇಜು ಆಡಳಿತ ಮಂಡಳಿಗಳ ಮಧ್ಯೆ ಪ್ರತಿವರ್ಷ ಒಪ್ಪಂದ ಆಗಬೇಕು. ಅದಕ್ಕೆ ಮುನ್ನ ಶುಲ್ಕ ನಿಗದಿ ಬಗ್ಗೆ ಒಮ್ಮತದ ತೀರ್ಮಾನ ಕೈಗೊಳ್ಳಬೇಕು. ಈ ವರ್ಷ ಶುಲ್ಕ ನಿಗದಿ ಆಗಿದೆಯಾದರೂ ಖಾಸಗಿ ಕಾಲೇಜುಗಳು ಎಷ್ಟು ಸೀಟುಗಳನ್ನು ಸರಕಾರಿ ಕೋಟಾದ ವಿದ್ಯಾರ್ಥಿಗಳಿಗೆ ಬಿಟ್ಟುಕೊಡಬೇಕು ಎಂಬ ಒಪ್ಪಂದ ಆಗದ ಕಾರಣ ಸರಕಾರ ಇನ್ನೂ ಸೀಟ್ ಮ್ಯಾಟ್ರಿಕ್ಸ್ ಪ್ರಕಟಿಸಿಲ್ಲ.

## ಆಪ್ಶನ್ ಎಂಟ್ರಿ ಯಾವಾಗ?

ಪ್ರಸಕ್ತ ಸಾಲಿನ ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಬಿ. ಫಾರ್ಮಾ, ಡಿ. ಫಾರ್ಮಾ ಕೋರ್ಸ್‌ಗಳ ಸರಕಾರಿ ಕೋಟಾದ ಸೀಟುಗಳ ಪ್ರವೇಶ ಪ್ರಕ್ರಿಯೆಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಪ್ರಾಧಿಕಾರದ ಅಧಿಕಾರಿಗಳು ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಸೀಟು ಪಡೆಯಲು ಬೇಕಾದ ಆಪ್ಶನ್ ಎಂಟ್ರಿ(ಆಯ್ಕೆ)ಗೆ ವೆಬ್‌ಸೈಟ್ ಲಿಂಕ್ ಓಪನ್ ಮಾಡುವುದೊಂದೇ ಬಾಕಿ ಇರುವ ಕೆಲಸ. ಆದರೆ ಖಾಸಗಿ ಕಾಲೇಜುಗಳ ಸೀಟ್ ಮ್ಯಾಟ್ರಿಕ್ಸ್ ಬಾರದೆ ಇರುವುದರಿಂದ ಈ ಲಿಂಕ್ ನೀಡಲು ಪ್ರಾಧಿಕಾರದ ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ. ಖಾಸಗಿ ಕಾಲೇಜುಗಳ ಸುಮಾರು 40 ಸಾವಿರಕ್ಕೂ ಅಧಿಕ ಸೀಟುಗಳು ಸೀಟ್ ಮ್ಯಾಟ್ರಿಕ್ಸ್‌ಗೆ ಲಭ್ಯವಿವೆ. ಈ ಸೀಟುಗಳು ಬಾರದೆ ಆಪ್ಶನ್ ಎಂಟ್ರಿ ನೀಡಿದರೆ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಈಗ ಆಪ್ಶನ್ ಎಂಟ್ರಿಗೆ ಅವಕಾಶ ನೀಡಿದರೆ ಸರಕಾರಿ ಕಾಲೇಜುಗಳ ಸೀಟನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಸಾಧ್ಯ. ಖಾಸಗಿಯಲ್ಲಿ ಇರುವಷ್ಟು ವಿವಿಧ ಎಂಜಿನಿಯರಿಂಗ್ ವಿಭಾಗಗಳು ಸರಕಾರಿ ಕಾಲೇಜುಗಳಲ್ಲಿ ಇಲ್ಲ. ಒಮ್ಮೆ ಸೀಟು ಆಯ್ಕೆ ಮಾಡಿಕೊಂಡರೆ ಬದಲಾವಣೆ ಅಸಾಧ್ಯ. ಹೀಗಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮ ಇಚ್ಛೆಯ ಕಾಲೇಜು ಪಡೆಯಲು ಸಾಧ್ಯವಾಗದು. ಈ ಕಾರಣದಿಂದ ಆಪ್ಶನ್ ಎಂಟ್ರಿ ಲಿಂಕ್ ನೀಡಲು ಪ್ರಾಧಿಕಾರದ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ.